ಸಂ: ಸಅಸಂ:ದಾಗೆರೆ/ವಅಅ–ಹ.ಹಳ್ಳಿ. 10.0956ಹೆ./ಎಫ್.ಸಿ/2019–20.
505

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗು
ತಾಂತ್ರಿಕ ಸಹಾಯಕರವರ ಕಛೇರಿ,
ದಾವಣಗೆರೆ ವಿಭಾಗ,
ದಾವಣಗೆರೆ. ದಿನಾಂಕ:14–01–2020.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ದಾವಣಗೆರೆ ವಿಭಾಗ,
ದಾವಣಗೆರೆ–ಇವರಿಗೆ.

ಮಾನ್ಯರೇ,

ವಿಷಯ:Diversion of 10.0956 Ha. of Forest land Sy.No.1/A and 1/D of Uchangidurga village, Uchangidurga Reserve Forest for M-sand Stone quarry and approach road in favour of Annapoorna Stone Crusher, Partner T. Basappa reg.,

ಉಲ್ಲೇಖ: 1) ತಮ್ಮ ಕಛೇರಿ ಪತ್ರ ಸಂ:ಬಿ4/ಲ್ಯಾಂಡ್/ಎಫ್.ಸಿ/ಸಿಆರ್/2019–20.
2) ವಲಯ ಅರಣ್ಯಾಧಿಕಾರಿ ಹರಪನಹಳ್ಳಿರವರ ಪತ್ರ ಸಂ:ವಅಅ/ಹ.ಹಳ್ಳಿ/ಲ್ಯಾಂಡ್ ಡೈವರ್ಷನ್ 2019–20, ದಿ:30–12–2019.

********

ಮೇಲ್ಕಂಡ ವಿಷಯ ಹಾಗು ಉಲ್ಲೇಖ ಪತ್ರಕ್ಕೆ ಸಂಬಂಧಿಸಿದಂತೆ ತಮ್ಮ ಉಲ್ಲೇಖ ಪತ್ರದನ್ವಯ ಶ್ರೀ.ಟಿ. ಬಸಪ್ಪ ಬಿನ್ ಟಿ.ಸಿದ್ದಪ್ಪ, ಅನ್ನಪೂರ್ಣ ಸ್ಟೋನ್ ಕ್ರಷರ್ಸ್, ದಾವಣಗೆರೆ ಇವರಿಗೆ ಹರಪನಹಳ್ಳಿ ತಾ॥ ಉಚ್ಚಂಗಿದುರ್ಗ ಮೀಸಲು ಅರಣ್ಯ ಪ್ರದೇಶದ ಉಚ್ಚಂಗಿದುರ್ಗ ಗ್ರಾಮದ ಸ.ನಂ.1/ಎ ಮತು 1/ಡಿರ ವಿಸ್ತೀರ್ಣ 10.0956 ಹೆ.ನಲ್ಲಿ ಎಂ–ಸ್ಯಾಂಡ್, ಕಲ್ಲುಕ್ವಾರಿ ಮತ್ತು ಕೂಡು ರಸ್ತೆಗಾಗಿ ಅರಣ್ಯ ಸಂರಕ್ಷಣಾ ಕಾಯ್ದೆ–1980 ಸೆಕ್ಷನ್ –2ರ ಪ್ರಕಾರ ಅರಣ್ಯ ಪ್ರದೇಶವನ್ನು ಬಿಡುಗಡೆಗೊಳಿಸುವ ಸಲುವಾಗಿ ಪ್ರಸ್ತಾಪಿತ ಪ್ರದೇಶವನ್ನು ನಾನು ದಿನಾಂಕ:13–01–2020ರಂದು ಸ್ಥಳ ವೀಕ್ಷಣೆಯನ್ನು ಮಾಡಿದ್ದು, ಉಲ್ಲೇಖಿತ–2ರ ಪತ್ರದಲ್ಲಿ ವಲಯ ಅರಣ್ಯಾಧಿಕಾರಿಯವರು ನೀಡಿರುವ ವರದಿಯು ನಿಜವಿದ್ದು, ಮಹಜರ್ ವರದಿಯ ಪ್ರಕಾರ ಸರಿ ಇದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ.

1) ಪ್ರಸ್ತಾಪಿತ ಪ್ರದೇಶವು ಉಚ್ಚಂಗಿದುರ್ಗ ಮೀಸಲು ಅರಣ್ಯ ಪ್ರದೇಶದ ವ್ಯಾಪ್ತಿಗೆ ಒಳಪಡುತ್ತಿದ್ದು, ಕಲ್ಲುಬಂಡೆಗಳಿಂದ ಕೂಡಿದ ಪ್ರದೇಶವಾಗಿದ್ದು ಅಲ್ಲಲ್ಲಿ ಕುರುಚಲು ಗಿಡಗಳಿಂದ ಕೂಡಿರುತ್ತದೆ. ಯಾವುದೇ ಬೆಳೆ ಬಾಳುವ ಗಿಡಮರಗಳು ಸದರಿ ಪ್ರದೇಶದಲ್ಲಿ ಕಂಡು ಬಂದಿರುವುದಿಲ್ಲ.
2) ಪ್ರಸ್ತಾಪಿತ ಪ್ರದೇಶವು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ –4ರಡಿ ಘೋಷಿತ ಅರಣ್ಯ ಪ್ರದೇಶದ ವ್ಯಾಪ್ತಿಗೆ ಒಳಪಡುತ್ತದೆ.
3) ಪ್ರಸ್ತಾಪಿತ ಪ್ರದೇಶವು ವನ್ಯಜೀವಿ ಅಭಯಾರಣ್ಯ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಗೆ ಒಳಪಡದೆ ರಂಗಯ್ಯನದುರ್ಗ ವನ್ಯಜೀವಿ ವಲಯದಿಂದ ಸುಮಾರು 18.00ಕಿ.ಮೀ. ದೂರದಲ್ಲಿರುತ್ತದೆ.
4) ಪ್ರಸ್ತಾಪಿತ ಪ್ರದೇಶವು ಕರ್ನಾಟಕ ಪುರಾತನ ಮತ್ತು ಚಾರಿತ್ರಿಕ ಸ್ಮಾರಕವಾದ ಶ್ರೀ ಉಚ್ಚಂಗಮ್ಮ ದೇವಸ್ಥಾನ ಶ್ರೀ ಕ್ಷೇತ್ರ ಉಚ್ಚಂಗಿದುರ್ಗದಿಂದ ಅಂದಾಜು 1.00ಕಿ.ಮೀ.ಗೂ ಅಧಿಕ ದೂರದಲ್ಲಿರುತ್ತದೆ.
5) ಪ್ರಸ್ತಾಪಿತ ಅರಣ್ಯ ಪ್ರದೇಶವು ಎಕೋ ಕ್ಲಾಸ್ ಭಾಗ–4ರ ಓಪನ್ ಫಾರೆಸ್ಟ್‌ನಲ್ಲಿ ಬರುತ್ತದೆ.

ಅದ್ದರಿಂದ ಸದರಿಯವರ ಪ್ರಸ್ತಾವನೆಯನ್ನು ಮುಂದಿನ ಕ್ರಮಕ್ಕಾಗಿ ತಮ್ಮ ಅವಗಾಹನೆಗಾಗಿ ಗೌರವಗಳೊಂದಿಗೆ ಸಲ್ಲಿಸಿದೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,
14/01/2020
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಹಾಗೂ ತಾಂತ್ರಿಕ ಸಹಾಯಕರು
ದಾವಣಗೆರೆ ವಿಭಾಗ, ದಾವಣಗೆರೆ

3568
14 JAN 2020
14/1/2020

D:\33-1\ACF Davangere New Files\Acf letter-1